# ಕನ್ನಡ ಸಾಹಿತ್ಯ ಪರಿಷತ್ತು

**ಪಂಪ ಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು - ೫೬೦ ೦೧೮**

# ನಿಬಂಧನೆಗಳು

---

(ಮೈಸೂರು ಸಂಸ್ಥಾನದ ಸಾರ್ವಜನಿಕ ಸಂಘಗಳ ಸಂಬಂಧವಾದ ಕಾನೂನಿನ ಮೇರೆಗೆ ಸರ್ಕಾರದಲ್ಲಿ ರಿಜಿಸ್ಟರಾಗಿದೆ. ರಿ.ನಂಬರು ೩೨೮/೧೯೧೫-೧೬ : ದಿನಾಂಕ ೧೨-೧೧-೧೯೧೫)

ಸ್ಥಾಪನೆ : ದಿನಾಂಕ : ೫-೫-೧೯೧೫

ದಿನಾಂಕ ೨೫-೧೧-೧೯೭೩, ೯-೭-೧೯೮೩, ೧೫-೫-೧೯೮೮ ಹಾಗೂ ೩೦-೯-೧೯೯೦ರಂದು ಸೇರಿದ್ದ ಪರಿಷತ್ತಿನ ವಿಶೇಷ ಸಕಲ ಸದಸ್ಯರ ಸಭೆಯಲ್ಲಿ ತಿದ್ದುಪಡಿಯಾಗಿ ಅಂಗೀಕಾರವಾಗಿದ್ದು, ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರಲ್ಲಿ ಕ್ರಮವಾಗಿ ಸಂಖ್ಯೆ ಸಿ.ನಂ.ಎ.ಎಂ.ಆರ್. ೨೩೫-೭೩-೭೪, ದಿನಾಂಕ ೮-೩-೧೯೭೪ ಎ.ಎಂ.ಆರ್. ೮೫, ೮೩-೮೪ ದಿನಾಂಕ ೨೧-೧೧-೧೯೮೩ ಹಾಗೂ ಎ.ಎಂ.ಆರ್.೮೩, ೮೮-೮೯ ದಿನಾಂಕ ೩೦-೬-೧೯೮೮ ಎ.ಎಂ.ಆರ್. ೧೩೦/೯೧-೯೨ ದಿನಾಂಕ ೨೬-೧೧-೧೯೯೧. ಹಾಗೂ ದಿನಾಂಕ ೨೮-೯-೧೯೯೭ರಂದು ಸೇರಿದ್ದ ಪರಿಷತ್ತಿನ ವಿಶೇಷ ಸಕಲ ಸದಸ್ಯರ ಸಭೆಯಲ್ಲಿ ತಿದ್ದುಪಡಿಯಾಗಿ, ಅಂಗೀಕಾರವಾಗಿದ್ದು, ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರಲ್ಲಿ ಸಂಖ್ಯೆ ಎ.ಎಂ.ಆರ್.೭೯/೯೭-೯೮ ದಿನಾಂಕ ೧೫-೪-೧೯೯೮ ಹಾಗೂ ದಿನಾಂಕ ೧೫-೦೩-೨೦೧೮ರಂದು ಸೇರಿದ್ದ ಪರಿಷತ್ತಿನ ವಿಶೇಷ ಸಕಲ ಸದಸ್ಯರ ಸಭೆಯಲ್ಲಿ ತಿದ್ದುಪಡಿಯಾಗಿ, ಅಂಗೀಕಾರವಾಗಿದ್ದು, ಕರ್ನಾಟಕ ಸೊಸೈಟಿಗಳ ರಿಜಿಸ್ಟ್ರಾರ್ ಅವರಲ್ಲಿ ಎಎಂಆರ್ ಸಂಖ್ಯೆ : ೫೭/೨೦೧೮-೧೯ ದಿನಾಂಕ ೨೫-೦೨-೨೦೧೯ರ ಪ್ರಕಾರ ಒಪ್ಪಿಗೆ ಪಡೆದಿದೆ.

ದಿನಾಂಕ : ೨೭-೦೨-೨೦೧೯

**ಬೆಲೆ : ಐದು ರೂಪಾಯಿಗಳು.**

ಸಂದಾಯವಾದ ಹಣವನ್ನು ಪರಿಷತ್ತು ಆ ಜಿಲ್ಲೆಯಲ್ಲಿ ಶಾಶ್ವತವಾದ, ಪರಿಷತ್ತಿನ ಸ್ಥಿರ ಆಸ್ತಿಗಾಗಿ ವೆಚ್ಚ ಮಾಡತಕ್ಕದ್ದು.

ಈ) ಪರಿಷತ್ತು ನೇರವಾಗಿ ನಡೆಸಿದ ಸಮ್ಮೇಳನದ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ ಉಳಿದ ಪೂರ್ಣ ಮೊಬಗಲನ್ನು ಪರಿಷತ್ತಿನ ಕಚೇರಿಗೆ ಸಲ್ಲಿಸತಕ್ಕದ್ದು.

೩೭. ಆಡಳಿತ ವರ್ಷ

ಅ) ಪರಿಷತ್ತಿನ ಆಡಳಿತ ವರ್ಷ ಏಪ್ರಿಲ್ ಒಂದರಿಂದ ಮಾರ್ಚ್ ಮೂವತ್ತೊಂದರವರೆಗೆ ಇರತಕ್ಕದ್ದು.

ಆ) ಪರಿಷತ್ತಿನ ಲೆಕ್ಕಗಳ ಬಗ್ಗೆ ವಿವರಣೆಯನ್ನು ಪರಿಷತ್ತಿನ ಸದಸ್ಯರಲ್ಲಿ ಯಾರೇ ಆಗಲಿ ಅಧ್ಯಕ್ಷರ ಅಥವಾ ಕಾರ್ಯದರ್ಶಿಗಳಿಂದ ಲಿಖಿತ ಮೂಲಕ ಪಡೆಯತಕ್ಕದ್ದು.

ಇ) ಪರಿಷತ್ತಿನ ಹಣಕಾಸು ವ್ಯವಹಾರಗಳನ್ನೊಳಗೊಂಡ ಲೆಕ್ಕಪತ್ರಗಳನ್ನು ಪ್ರತಿವರ್ಷ ಕರ್ನಾಟಕ ಸರ್ಕಾರದ ರಾಜ್ಯ ಲೆಕ್ಕಪತ್ರ ಇಲಾಖೆಯಿಂದ ಆಡಿಟ್ ಮಾಡಿಸಿ ಅವರ ವರದಿಯೊಂದಿಗೆ ಅದನ್ನು ವಾರ್ಷಿಕ ಸಭೆಯ ಅಂಗೀಕಾರಕ್ಕಾಗಿ ಮಂಡಿಸಬೇಕು.

ಈ) ಲೆಕ್ಕಪತ್ರಗಳನ್ನು ವಾಣಿಜ್ಯ ರೂಪದಲ್ಲಿ ಇರಿಸತಕ್ಕದ್ದು.

೩೮. ವ್ಯವಹಾರ

ಅ) ಪರಿಷತ್ತಿನ ಆಸ್ತಿಯನ್ನು ಕೂಡಿಸುವ, ರೂಢಿಸುವ, ವಿಲೇವಾರಿ ಮಾಡುವ ಅಧಿಕಾರ ಸಕಲ ಸದಸ್ಯರ ಸಭೆಗೆ ಇರತಕ್ಕದ್ದು.

ಆ) ಪರಿಷತ್ತಿನ ಆಸ್ತಿಯನ್ನು ಅಡವು ಇಡುವ, ವಿಲೇವಾರಿ ಮಾಡುವ ಹಾಗೂ ಪರಿಷತ್ತಿಗೆ ಆಸ್ತಿಯನ್ನು ಕೊಳ್ಳುವ, ಮಾರುವ ಇತ್ಯಾದಿ ಅಧಿಕಾರ ಸಕಲ ಸದಸ್ಯರ ಸಭೆಗೆ ಇರತಕ್ಕದ್ದು.

ಇ) ಪರಿಷತ್ತಿನ ಆಸ್ತಿಯನ್ನು ಬಾಡಿಗೆಗೆ ಕೊಡುವ ಮತ್ತು ಬಾಡಿಗೆ ಪಡೆಯುವ ಅಧಿಕಾರವು ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು.

ಈ) ಪರಿಷತ್ತಿನ ಆಡಳಿತವೆಲ್ಲ ಅಧ್ಯಕ್ಷರ ಮೇಲ್ವಿಚಾರಣೆಯಲ್ಲಿ ನಡೆಯ ತಕ್ಕದ್ದು.